# ಉತ್ತರಾಖಂಡದ ಜನಪದ ನೃತ್ಯಗಳು

ಉತ್ತರಾಖಂಡವು ಭಾರತದಲ್ಲಿ ಇದೆ. ಇಲ್ಲಿಯ ಜನಪದ ನೃತ್ಯಗಳು ಪ್ರವಾಸಿಗಳ ಮನಸೂರೆಗೊಳ್ಳುತ್ತದೆ. ಲಾಂಗ್ವೀರ ನೃತ್ಯ, ಪಾಂಡವ ನೃತ್ಯ, ಶೊತೀಯ, ಚೋಪಾಟಿ, ಜುಮೇಲಾ, ಮಂಗಲ, ಬಸಂತ, ಜಗರ್, ರಮೊಲ, ಬಾಜುಬಂದ, ಚೋಲಿಯ ಹೀಗೆ ಇನ್ನೂ ಹಲವು. ಇಲ್ಲಿ ಎರಡು ನೃತ್ಯಗಳ ಬಗ್ಗೆ ವಿವರಿಸಿದ್ದೇನೆ.

ಪಾಂಡವ ನೃತ್ಯವು ಹಿಂದೂ ಪುರಾಣದ ಐದು ವೀರರ ಕಥೆಯನ್ನು ಹೇಳುತ್ತದೆ. ಈ ಮೋಹಕ ನೃತ್ಯದ ಮೂಲಕ ಅವರ ಜೀವನದ ವಿವಿಧ ಹಂತಗಳನ್ನು ಡ್ರಾಮಾ ಬೀಟ್ ಗಳಲ್ಲಿ ಪ್ರದರ್ಶಿಸಲಾಗುತ್ತದೆ. ಇದು ಪ್ರತಿ ವರ್ಷ ನವೆಂಬರ್ ನಲ್ಲಿ ೧೦ - ೧೨ ದಿನಗಳ ಕಾಲ ನಡೆಯುತ್ತದೆ. ಪಾಂಡವ ನೃತ್ಯದ ಕೊನೆಯ ದಿನದಲ್ಲಿ, ಗ್ರಾಮಸ್ಥರಿಗೆ ಭವ್ಯವಾದ ಔತಣವನ್ನು ಏರ್ಪಡಿಸಲಾಗುತ್ತದೆ. ಪಾಂಡವರ ಶಕ್ತಿಗಳು ರಂಗ ಪ್ರದರ್ಶನದ ಸಮಯದಲ್ಲಿ ಕಲಾವಿದರ ದೇಹದಲ್ಲಿ ಪ್ರವೇಶಿಸುತ್ತದೆ ಎಂದು ಹೇಳಲಾಗುತ್ತದೆ.

ಚೋಲಿಯ ನೃತ್ಯವು ಖಡ್ಗ ನೃತ್ಯವಾಗಿದ್ದು, ಕುಮಾವೋನಿ ಬುಡಕಟ್ಟಿನ ಸಮರ ಕಲೆಯ ಸಂಪ್ರದಾಯಗಳನ್ನು ಚಿತ್ರಿಸಲು ಉದ್ದೇಶಿಸಲಾಗಿದೆ. ಈ ನೃತ್ಯ ಪ್ರಕಾರವು ಸಾವಿರ ವರ್ಷಗಳಷ್ಟು ಹಳೆಯದು ಮತ್ತು ಇದನ್ನು ಸ್ಥಳಿಯ ರಜಪೂತ ವಿವಾಹಗಳಲ್ಲಿ ಪ್ರದರ್ಶಿಸಲಾಗುತ್ತದೆ. ಚೋಲಿಯ ನರ್ತಕರು ಕತ್ತಿಗಳು, ಗುರಾಣಿಗಳು, ತುರಿ ಮತ್ತು ರಾಂಸಿಂಗ್ ಸೇರಿದಂತೆ ಪ್ರಾದೇಶಿಕ ಹಿತ್ತಾಳೆ ವಾದ್ಯಗಳು ಮತ್ತು ಧೋಲ್ ಮತ್ತು ಢಮರು ಮುಂತಾದ ತಾಳವಾದ್ಯಗಳನ್ನು ಹೊಂದಿದ್ದಾರೆ. ನರ್ತಕರು ಕುಮಾವೂನ್ ಯೋಧರಂತೆ ವೇಷಭೂಷಣ ಧರಿಸುತ್ತಾರೆ.

FOR KANNADA
ಕನ್ನಡಕ್ಕಾಗಿ ಇಲ್ಲಿ ಬನ್ನಿ